ಇ) ಇದೇ ಸೂತ್ರವನ್ನು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ಅನ್ವಯಿಸದೆ ನಿಗಮದ ನೌಕರರು ಕೈಮಗ್ಗದ ಬಟ್ಟೆಗಳನ್ನು ಧರಿಸುವ ಬಗ್ಗೆ ಸರ್ಕಾರ ಕ್ರಮ ಕೈಕೊಳ್ಳುವುದೇ

ಈ) ರೇಷ್ಮೆ ಇಲಾಖೆಯ ನಿಗಮ ಹಾಗೂ ಮಳಿಗೆಗಳ ನೌಕರರು ಮೈಸೂರು ರೇಷ್ಮೆ ಬಟ್ಟೆಗಳನ್ನು ತೊಡುವ ಬಗ್ಗೆ ಯೋಚಿಸಲಾಗುವುದೇ

ಶ್ರೀ ಆರ್. ವಿ. ದೇಶಪಾಂಡೆ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು).—

ಅ) ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧಿನಿಯಮ ೧೯೫೬ ಅಥವಾ ಅದರ ಕೆಳಗೆ ಮಾಡಿದ ನಿಯಮಾವಳಿಗಳಲ್ಲಿ ಖಾದಿ ಮಂಡಳಿಯ ನೌಕರರು ಖಾದಿಯನ್ನೇ ಕಡ್ಡಾಯವಾಗಿ ಧರಿಸಬೇಕೆಂಬ ಷರತ್ತು ಇರುವುದಿಲ್ಲ. ಆದರೆ ಮಂಡಳಿಯ ನೌಕರರು ಖಾದಿಯನ್ನೇ ಧರಿಸಬೇಕೆಂಬ ಷರತ್ತು ಮಂಡಳಿಯ ನೌಕರರ ನೇಮಕಾತಿ ಆದೇಶದಲ್ಲಿ ಅಳವಡಿಸಲಾಗಿದೆ.

ಆ) ಹೌದು. ಮಂಡಳಿಗೆ ಸರ್ಕಾರವು ಈಗಾಗಲೇ ಸೂಕ್ತ ನಿರ್ದೇಶನ ಕೊಟ್ಟಿದೆ.

ಇ) ಪರಿಶೀಲಿಸಲಾಗುವುದು.

ಈ) ಇದು ಸಣ್ಣ ಕೈಗಾರಿಕಾ ಮಂತ್ರಿಗಳ ವ್ಯಾಪ್ತಿಗೆ ಬರುವುದಿಲ್ಲ.

ಮಂಗಳೂರು ತಾಲ್ಲೂಕಿನಲ್ಲಿ ಮನೆ ನಿವೇಶನ ಹಂಚಿಕೆ ವಿಚಾರ ಕುರಿತು.

೨೩೧. ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ವಸತಿ ಮತ್ತು ಸಾರಿಗೆ ರಾಜ್ಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೩-೮೪, ೧೯೮೪-೮೫ನೇ ಡಿಸೆಂಬರ್ ಅಂತ್ಯದವರೆಗೆ ಮಂಗಳೂರು ತಾಲ್ಲೂಕಿನಲ್ಲಿ ಎಷ್ಟು ಜನ ನಿವೇಶನ ರಹಿತರಿಗೆ ನಿವೇಶನ ಕೊಡಲಾಗಿದೆ.

ಆ) ಈಗ ಬಾಕಿ ಉಳಿದಿರುವ ಅರ್ಜಿಗಳು ಎಷ್ಟು

ಇ) ಬಾಕಿ ಉಳಿದ ಅರ್ಜಿಗಳ ಪೂರ್ತಿ ವಿಲೇವಾರಿ ಯಾವಾಗ ಮಾಡಲಾಗುವುದು

ಶ್ರೀ ಪಿ.ಜಿ.ಆರ್. ಸಿಂಧ್ಯ (ವಸತಿ ಹಾಗೂ ಸಾರಿಗೆ ರಾಜ್ಯ ಸಚಿವರು).—

ಅ) ಮಂಗಳೂರು ತಾಲ್ಲೂಕಿನಲ್ಲಿ ೧೯೮೩-೮೪ನೇ ಸಾಲಿನಲ್ಲಿ ೧೪೪೫, ೧೯೮೪-೮೫ನೇ ಸಾಲಿನಲ್ಲಿ ೬೪೩ ಹಾಗೂ ೧೯೮೫-೮೬ನೇ ಡಿಸೆಂಬರ್ ಅಂತ್ಯದವರೆಗೆ ೪೦೨ ನಿವೇಶನಗಳನ್ನು ಹಂಚಲಾಗಿದೆ.

ಆ) ಒಟ್ಟು ೨೩೦ ಅರ್ಜಿಗಳು ವಿಲೇವಾರಿಯಾಗಬೇಕಾಗಿದೆ.

ಇ) ಆದಷ್ಟು ಬೇಗ ಮಾಡಲು ಸೂಚನೆ ನೀಡಲಾಗುವುದು.

ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಭವಿಷ್ಯದ ಬಗ್ಗೆ.

೨೩೭. ಶ್ರೀ ಬಿ. ಎ. ಉಮರಬ್ಬ (ವಿಧಾನ ಸಭಾ ಸದಸ್ಯರು).—ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭದ್ರಾವತಿ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಭವಿಷ್ಯದ ಬಗ್ಗೆ ಸರ್ಕಾರದವರ ನಿಲುವೇನು ?

ಆ) ಆ ಕಾರ್ಖಾನೆಯು ದುರವಸ್ಥೆಯಿಂದಾಗಿ ಸಂಕಷ್ಟಕ್ಕೊಳಗಾಗಿರುವ ಸಹಸ್ರಾರು ಕಾರ್ಮಿಕರ ಬಗ್ಗೆ ಸರಕಾರದವರು ತೆಗೆದುಕೊಳ್ಳುವ ನಿಲುವೇನು ?

ಶ್ರೀ ಜೆ. ಹೆಚ್. ಪಟೇಲ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು).—

ಅ) ಈ ಕಾರ್ಖಾನೆಯನ್ನು ತೆಗೆದುಕೊಳ್ಳಲು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರವನ್ನು ಮನಗಾಣಿಸುತ್ತಿದೆ.

ಆ) ಸಂಕಷ್ಟಕ್ಕೊಳಗಾಗಿರುವ ಕಾರ್ಮಿಕರ ಬಗ್ಗೆ ಸರಕಾರಕ್ಕೆ ಸಹಾನುಭೂತಿ ಇದೆ ಹಾಗೂ ಇವರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳಲಾಗುತ್ತದೆ.